**ಸಿಸಿ ಸಂಃ 226/2023**
**ಪಿ.ಡಬ್ಲ್ಯೂ:1**

**<u>ದಿನ ದಿನಾಂಕಃ 26-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ಶ್ರೀ. ಎಸ್ ಪಿ ಆರೋಪಿ ಪರ ವಕೀಲರಿಂದಃ</u>**

ನನ್ನ ಸ್ವಂತ ಊರು ಗುಳ್ಳೆಹಳ್ಳಿ ಗ್ರಾಮ. ನನ್ನ ಮೂಲ ಊರು ಅರಳಿಕಟ್ಟೆ ಗ್ರಾಮ ಎಂದರೆ ಸರಿ. ನಾನು ಗುಳ್ಳೆಹಳ್ಳಿ ಗ್ರಾಮಕ್ಕೆ ಬಂದ ನಂತರ ವ್ಯವಸಾಯ ಮತ್ತು ಕೋಳಿಫಾರಂ ವ್ಯವಹಾರ ಮಾಡುತ್ತಿದ್ದೇನೆ. ನಾನು ಕೋಳಿ ಫಾರಂ ವ್ಯವಹಾರ ಕಳೆದ 20 ವರ್ಷಗಳಿಂದ ಮಾಡುತ್ತಿದ್ದೇನೆ. ನಾನು ಸದರಿ ಕೋಳಿ ಫಾರಂ ನಡೆಸಲು ಹೊರರಾಜ್ಯಗಳಿಂದ ಕೂಲಿ ಕೆಲಸಗಾರರು ಇದ್ದಾರೆ. ನಾನು ಕೋಳಿ ಫಾರಂ ವ್ಯವಹಾರವನ್ನು ಗುಳ್ಳೆಹಳ್ಳಿ ಗ್ರಾಮದ ಸುತ್ತಮುತ್ತಲಿನ ತಾಂಡದಿಂದ ಕೂಲಿ ಕೆಲಸಗಾರರನ್ನು ನೇಮಿಸಿಕೊಂಡು ವ್ಯವಹಾರ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಬೆಳೆಸಿದ ಕೋಳಿಗಳನ್ನು ಕರ್ನಾಟಕ ಮತ್ತು ಹೊರರಾಜ್ಯಗಳಿಗೂ ಸಹ ಕಳುಹಿಸುತ್ತೇನೆ. ನಾನು ಕೋಳಿಗಳನ್ನು ಮಾರಾಟ ಮಾಡಿದ ಹಣವನ್ನು ಚೆಕ್ ಮತ್ತು ಡಿಡಿ ಮೂಲಕ ಪಡೆಯುತ್ತೇನೆ. ಸಾಕ್ಷಿ ಮುಂದುವರೆದು ಕಳೆದ 8-10 ವರ್ಷಗಳಿಂದ ಆನ್ ಲೈನ್ ಮೂಲಕ ಹಣ ಪ ಡೆಯುತ್ತಿದ್ದೇನೆಂದು ನುಡಿಯುತ್ತಿದ್ದಾರೆ.

ಆರೋಪಿ ಕೆ ಇ ಬಿ ಗುತ್ತಿಗೆದಾರನಾಗಿದ್ದು ಮತ್ತು ಪಕ್ಕದ ಊರಿನವನಾಗಿದ್ದ ಕಾರಣ 10 ವರ್ಷಗಳಿಂದ ಪರಿಚಯ. ಸಾಕ್ಷಿ ಮುಂದುವರೆದು ತನ್ನ ಜಮೀನಿನ ಹತ್ತಿರ ಆರೋಪಿಯ ಜಮೀನುಗಳು ಇವೆ ಎಂದು ನುಡಿಯುತ್ತಾರೆ. ನನ್ನ ಜಮೀನಿನ ಪಕ್ಕ ಆರೋಪಿಯ ಯಾವುದೇ ಜಮೀನು ಇಲ್ಲ ಬದಲಾಗಿ ಕಳೆದ 10 ವರ್ಷಗಳಿಂದ ಆರೋಪಿ ನನ್ನ ಕೋಳಿ ಫಾರಂನಲ್ಲಿ ಕೂಲಿ ಅಂತಾ ಕೆಲಸ ಮಾಡುತ್ತಿದ್ದಾನೆಂದರೆ ಸರಿ. ಆರೋಪಿ ಅಲ್ಲದೇ ಹಿರಲೂಡ ತಾಂಡ ಸುಮಾರು 50-60 ಮಹಿಳೆ ಮತ್ತು ಪುರುಷರು ನನ್ನ ಕೋಳಿ

ಫಾರಂ ನಲ್ಲಿ ಕೂಲಿ ಕೆಲಸಗಾರರು ಅಂತಾ ಕೆಲಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನನ್ನ ಕೋಳಿ ಫಾರಂ ನಲ್ಲಿ ಕೆಲಸ ಮಾಡುವ ಕೂಲಿಕಾರರಿಂದ ಮದ್ಯದಲ್ಲಿ ಕೆಲಸ ಬಿಟ್ಟು ಹೋಗಬಾರದು ಎಂದು ಭದ್ರತೆಗಾಗಿ ಅವರಿಂದ ಚೆಕ್ ಮತ್ತು ಪಾಸ್ ಬುಕಗಳನ್ನು ಪಡೆದುಕೊಳ್ಳುತ್ತೇನೆಂದರೆ ಸರಿಯಲ್ಲ.

ಆರೋಪಿ ನಾನು ನಡೆಸುತ್ತಿದ್ದ ಕೋಳಿ ಫಾರಂನಲ್ಲಿ ಮ್ಯಾನೇಜರ್ ಅಂತಾ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಾನು ಉಡುಪಿ ಮತ್ತು ಮಲ್ಪೆಯಲ್ಲಿ ವಾಸ ಇದ್ದೆ ಮತ್ತು ಆ ಕಾಲದಲ್ಲಿ ನನ್ನ ಕೋಳಿ ಫಾರಂ ನಲ್ಲಿ ಬೆಳೆದ ಕೋಳಿಗಳನ್ನು ಆರೋಪಿ ಮೂಲಕ ವ್ಯವಹಾರ ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ. ಆ ಕಾಲದಲ್ಲಿ ನಾನು ಆರೋಪಿಯಿಂದ ಭದ್ರತೆಗಾಗಿ ಚೆಕ್ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತನ್ನ ಕೋಳಿ ಫಾರಂನಲ್ಲಿ ಮ್ಯಾನೇಜರ್ ಅಂತಾ ಯಾರು ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ಕೋಳಿ ಫಾರಂನಲ್ಲಿ ಕೂಲಿಕೆಲಸಗಾರನಾಗಿದ್ದು ಬದಲಾಗಿ ಕೆ ಇ ಬಿ ಗುತ್ತಿಗೆದಾರ ಅಲ್ಲ ಎಂದರೆ ಸರಿಯಲ್ಲ. ನನ್ನಿಂದ ಆರೋಪಿ ಯಾವತ್ತು ಹಣ ಪಡೆಯದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿಗೆ ನಾನು ದಿಃ09-08-2018 ರಂದು ರೂ.3 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ಆರೋಪಿಗೆ ಡಿಡಿ ಮೂಲಕ ಹಣ ನೀಡಿದ್ದಾಗಿ ನುಡಿಯುತ್ತಾರೆ. ಆರೋಪಿಯ ಹೆಸರಿನಲ್ಲಿ ಡಿಡಿ ಪಡೆದು ನನ್ನ ವ್ಯವಹಾರಕ್ಕೆ ಬಳಸಿಕೊಂಡಿದ್ದೇನೆಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ್ದ ನಿಪಿ 1 ರ ಚೆಕನ್ನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ.

**ಸಿಸಿ ಸಂಃ 226/2023**
**ಪಿ.ಡಬ್ಲ್ಯೂ:1**

ದಿಃ20-08-2021 ರಂದು ನಾನು ನಿಪಿ 1 ರ ಚೆಕನ್ನು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದೆ. ದಿಃ 26-08-2021 ರಂದು ನಿಪಿ 1 ರ ಚೆಕ ನಗದಾಗದೇ ಮರಳಿ ಬಂದಿತ್ತು. ನಿಪಿ 3 ರಂತೆ ನಾನು ಆರೋಪಿಗೆ ಯಾವುದೇ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.